ಶ್ರೀ ಧರ್ಮಸಿಂಗ್ ಲೋಕೋಪಯೋಗಿ ಸಚಿವರು) :—

1. ಹಾಸನ ಜಿಲ್ಲೆಯ ವಿಶ್ವವಿಖ್ಯಾತ ಐತಿಹಾಸಿಕ ಪ್ರವಾಸೋದ್ಯಮಗಳಾದ ಬೇಲೂರು, ಹಳೇಬೀಡು, ಹಳೇಬೀಡು-ಹಗರೆ ಮತ್ತು ಹಾಸನ-ಹಗರೆ-ಬೇಲೂರು ಸೇರುವ ರಸ್ತೆಗಳ ಅಭಿವೃದ್ಧಿ ಕೆಲಸಕ್ಕೆ ರೂ. 7.50 ಲಕ್ಷಗಳಿಗೆ ವಿವರವಾದ ಅಂದಾಜನ್ನು ತಯಾರಿಸಲಾಗಿದೆ. ಈ ಕಾಮಗಾರಿಯ ಅಭಿವೃದ್ಧಿ ಕೆಲಸಗಳನ್ನು ಹಣದ ಲಭ್ಯತೆಯನ್ನು ಆಧರಿಸಿ ಆದ್ಯತೆಯ ಮೇರೆಗೆ ಕೈಗೊಳ್ಳಲಾಗುವುದು.

ಹೋಬಳಿ ಮಟ್ಟದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವ ಬಗ್ಗೆ.

2262 (೨೬೯೨) ಶ್ರೀ ಎನ್.ಎಚ್ ಪುಟ್ಟರಂಗನಾಥ್ (ಬೇಲೂರು) :— ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹೋಬಳಿ ಮಟ್ಟದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ?

ಆ) ಹಾಗಿದ್ದಲ್ಲಿ ಕೈಗೊಂಡಿರುವ ಕ್ರಮವೇನು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ನಿಗಮಗಳು.

2264(2750) ಶ್ರೀ ರಾಜು ಗೌಡ ಕೆ. (ಹನ್ನೂರು) :— ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಎಷ್ಟು ನಿಗಮಗಳು ಇವೆ.

ಆ) ಅವುಗಳು ಯಾವುವು; ಹಾಗೂ ಎಂದಿನಿಂದ ಅಸ್ತಿತ್ವಕ್ಕೆ ಬಂದಿದೆ;

ಇ) ಇವುಗಳಿಗಾಗಿ ಅರಣ್ಯ ಇಲಾಖೆಯಿಂದ ಹೂಡಿರುವ ಬಂಡವಾಳ ಎಷ್ಟು?

ಈ) ಇವುಗಳಿಂದ ಎಷ್ಟು ಜನರಿಗೆ ಉದ್ಯೋಗ ಒದಗಿಸಲಾಗಿದೆ; ಅವುಗಳಿಂದ ಎಷ್ಟು ರೂ. ಲಾಭ ಬಂದಿದೆ.

ಶ್ರೀ ಕೆ.ಪಿಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

ಅ) 6 ನಿಗಮ ಹಾಗೂ ಕಂಪನಿಗಳಿವೆ.

ನಿಗಮಗಳು	ಅಸ್ತಿತ್ವಕ್ಕೆ ಬಂದ ದಿನಾಂಕ
1) ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ	25-1-1971
2) ಕರ್ನಾಟಕ ಪಲ್ಪ್‌ವುಡ್ ಲಿಮಿಟೆಡ್ (ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಹಿಡುವಳಿ ನಿಗಮ)	14-3-1965
3) ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ	21-3-1973
4) ಮೈಸೂರು ಮ್ಯಾಚ್ ಕಂಪನಿ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ಹಿಡುವಳಿ ನಿಗಮ)	17-5-1940
5) ಕರ್ನಾಟಕ ರಾಜ್ಯ ವೀನಿಯಲ್ಸ್ ಲಿಮಿಟೆಡ್ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ಹಿಡುವಳಿ ನಿಗಮ)	26-5-1974
6) ಕರ್ನಾಟಕ ಗೇರು ಅಭಿವೃದ್ಧಿ ನಿಗಮ	ಫೆಬ್ರವರಿ 1978

ಆ)	1) ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ	ಸರ್ಕಾರದಿಂದ ಹೂಡಿರುವ ಬಂಡವಾಳ ರೂ.9,06,40,500
	2) ಕರ್ನಾಟಕ ಪಲ್ಪ್‌ವುಡ್ ಲಿಮಿಟೆಡ್	--
	3) ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ	ಸರ್ಕಾರವು ರೂ.115.53 ಲಕ್ಷ ಬಂಡವಾಳ ಹೂಡಿದೆ.
	4) ಮೈಸೂರು ಮ್ಯಾಚ್ ಕಂಪನಿ	ಸರ್ಕಾರದ ಶೇರು ಬಂಡವಾಳ ರೂ.50,000.
	5) ಕರ್ನಾಟಕ ರಾಜ್ಯ ರೀನಿಯಲ್ಸ್ ಲಿಮಿಟೆಡ್	--
	6) ಕರ್ನಾಟಕ ಗೇರು ಅಭಿವೃದ್ಧಿ ನಿಗಮ	1) ಕರ್ನಾಟಕ ಸರ್ಕಾರದ ಶೇರು ಬಂಡವಾಳ ರೂ.410.08 ಲಕ್ಷಗಳು 2) ಭಾರತ ಸರ್ಕಾರದ ಬಂಡವಾಳ ರೂ.44.00 ಲಕ್ಷಗಳು

ಈ)	ನಿಗಮ	ಉದ್ಯೋಗಿಗಳ ಸಂಖ್ಯೆ
1)	ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ	1) 790 ನೌಕರರು ಹಾಗೂ 1948 ಖಾಯಂ ರಬ್ಬರ್ ಕೆಲಸಗಾರರು
2)	ಕರ್ನಾಟಕ ಪಲ್ಪ್ ವುಡ್ ಲಿಮಿಟೆಡ್	183
3)	ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ	358
4)	ಮೈಸೂರು ಮ್ಯಾಚ್ ಕಂಪನಿ	03
5)	ಕರ್ನಾಟಕ ರಾಜ್ಯ ವೀನಿಯಲ್ಸ್ ಲಿಮಿಟೆಡ್	177
6)	ಕರ್ನಾಟಕ ಗೇರು ಅಭಿವೃದ್ಧಿ ನಿಗಮ	152

ಈಗ ಸದ್ಯ ಈ ಎಲ್ಲಾ ನಿಗಮಗಳೂ ನಷ್ಟದಲ್ಲಿವೆ.

ರಾಜ್ಯದಲ್ಲಿ ಕಳ್ಳ ಸಾಗಾಣಿಕೆ ಶ್ರೀಗಂಧದ ಮರಗಳು.

2265(2751) ಶ್ರೀ ರಾಜು ಗೌಡ ಕೆ. (ಹನ್ನೂರು) :— ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಶ್ರೀಗಂಧದ ಮರಗಳನ್ನು ಕಳ್ಳ ಸಾಗಾಣಿಕೆ ಮಾಡುತ್ತಿದ್ದಾಗ ಎಷ್ಟು ಪ್ರಮಾಣದ ಮರಗಳನ್ನು ಇಲಾಖೆಯವರು ವಶ ಪಡಿಸಿಕೊಂಡಿದ್ದಾರೆ?

ಆ) ವಶಪಡಿಸಿಕೊಂಡಿರುವ ಶ್ರೀಗಂಧದ ಮರಗಳನ್ನು ತಕ್ಷಣ ಮಾರಾಟ ಮಾಡಲು ತೊಂದರೆಯೇನು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

ಅ) ವಿವರಗಳು ಈ ಕೆಳಕಂಡಂತೆ ಇರುತ್ತದೆ.

ವರ್ಷ	ವಶಪಡಿಸಿಕೊಂಡ ವಾಹನಗಳ ಸಂಖ್ಯೆ	ವಶಪಡಿಸಿಕೊಂಡ ಶ್ರೀಗಂಧದ ಪ್ರಮಾಣ ಮೆ. ಟನ್ನುಗಳಲ್ಲಿ
1998-1999	699	52.284
1999-2000	1241	76.754
2000-2001	1336	52.383